**ದಿನಾಂಕಃ 22.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀಸವಾಲುಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ -**

14. ಆ ದಿನ ಪಿರ್ಯಾದಾರರು, ಆರೋಪಿಗೆ ಹಣವನ್ನು ಕೊಡುವ ಸಮಯದಲ್ಲಿ ನಾನು ಅವರೊಂದಿಗೆ ಇರಲಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ- ಆರೋಪಿ ಪರ ವಕೀಲರಿಂದಃ-**

15. ಆ ದಿನ ನನ್ನ ಮೇಲಾಧಿಕಾರಿಗಳು ನನಗೆ ಎಸಿಬಿ ಕಛೇರಿಗೆ ಹೋಗಲು ಅನುಮತಿ ನೀಡಿದಾಗ, ಎಸಿಬಿ ಅಧಿಕಾರಿಗಳು ಹೇಗೆ ನಿರ್ದೇಶನವನ್ನು ನೀಡುತ್ತಾರೋ ಹಾಗೆ ನಡೆದುಕೊಳ್ಳಬೇಕು ಎಂದು ಹೇಳಿ ಕಳುಹಿಸಿದ್ದರು ಎನ್ನುವುದು ಸರಿ. ನಾನು ಎಸಿಬಿ ಕಛೇರಿಗೆ ಕೇವಲ ಒಂದು ಬಾರಿ ಮಾತ್ರ ಹೋಗಿರುತ್ತೇನೆ. ಎಸಿಬಿ ಕಛೇರಿಗೆ ಹೋದ ನಂತರ ಅಲ್ಲಿ ನಡೆದಂತಹ ಪ್ರಕ್ರಿಯೆಗಳಲ್ಲಿ, ಎಸಿಬಿ ಅಧಿಕಾರಿಗಳು ಯಾವ ರೀತಿಯ ಸೂಚನೆಗಳನ್ನು ಕೊಟ್ಟಿದ್ದರೋ, ಅವುಗಳನ್ನು ನಾನು ಪಾಲಿಸಿರುತ್ತೇನೆ ಎನ್ನುವುದು ಸರಿ. ನಾನು ಪಿರ್ಯಾದನ್ನು ಓದಿದಾಗ ಅದರಲ್ಲಿ ಮೊದಲ ಬಾರಿಗೆ ಯಾವ ದಿನಾಂಕದಂದು ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು ಎನ್ನುವುದು ಕಂಡು ಬರಲಿಲ್ಲ. ನಿಪಿ-14 ರ ಪುಟಸಂಖ್ಯೆ 165 ರಲ್ಲಿ, ಸದರಿ ಕಡತವನ್ನು ಮುಂದಿನ ಕ್ರಮಕ್ಕಾಗಿ ರಾಜಸ್ವ ನಿರೀಕ್ಷಕರು ಕಸಬಾ ಹೋಬಳಿ ಮೈಸೂರು ತಾಲ್ಲೂಕು ರವರಿಗೆ ಕಳುಹಿಸಲಾಗಿದೆ ಎಂದಿದೆ ಎನ್ನುವುದು ಸರಿ. ಈ ದಾಖಲಾತಿಯನ್ನು ನೋಡಿದ ನಂತರ ಪಿರ್ಯಾದುದಾರರಲ್ಲಿ ವಿಚಾರಿಸಿದಾಗ ಕಡತ ತಹಸೀಲ್ದಾರರು ರಾಜಸ್ವ ನಿರೀಕ್ಷಕರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ನಿಪಿ-13 ನ್ನು ಈ ಪ್ರಕರಣಕ್ಕಾಗಿ ತಯಾರು ಮಾಡಲಾಗಿದೆ ಎನ್ನುವುದು ಸರಿಯಲ್ಲ. ನಾವು ಹೇಳಿದಂತೆ ನಿಪಿ-13 ನ್ನು ತಯಾರಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

16. ಮೊಬೈಲಿನ ಮೊಮರಿ ಚಿಪ್ಪಿನಿಂದ ಸಂಭಾಷಣೆಯನ್ನು ಸಿಡಿಗೆ ವರ್ಗಾಯಿಸಿದರು ಎಸಿಬಿ ಸಿಬ್ಬಂದಿಯವರಾದ ವಿನಯ್ ಮತ್ತು ತನಿಖಾಧಿಕಾರಿಯಾದ ಗಜೇಂದ್ರಪ್ರಸಾದ್ ಎನ್ನುವುದು ಸರಿ. ಇದನ್ನು ಸದರಿ ಮಹಜರಿನಲ್ಲಿ ನಮೂದಿಸಲಾಗಿದೆಯೇ, ಇಲ್ಲವೇ ನನಗೆ ಗೊತ್ತಿಲ್ಲ.

17. ದೂರುದಾರರು ನೀಡಿದ ದೂರನ್ನು ಓದಿ ನೋಡಲಾಗಿ ಅದರಲ್ಲಿ ಹಣವನ್ನು ಕೊಡಲು ತಾಲ್ಲೂಕು ಕಛೇರಿಗೆ ಬರಬೇಕು, ಎಂದೇನು ನಮೂದು ಇರಲಿಲ್ಲ. ಆರೋಪಿ ಸಿದ್ದಲಿಂಗಪುರದ ಗ್ರಾಮ ಲೆಕ್ಕಿಗರಾಗಿದ್ದರು ಎನ್ನುವುದು ಸರಿ. ಆರೋಪಿಯ ಕಛೇರಿ ಇದ್ದದ್ದು ಸಿದ್ದಲಿಂಗಪುರದಲ್ಲಿ ಎನ್ನುವುದು ಸರಿ. ಪಿರ್ಯಾದುದಾರರು ಆ ಕಛೇರಿಯಿಂದ ಹೊರಬಂದು, ನಾನು ಆರೋಪಿಗೆ ಹಣ ಕೊಟ್ಟೆ ಎಂದು ಹೇಳಿರುವುದಿಲ್ಲ ಮತ್ತು ಆರೋಪಿ ಎಡಗೈನಿಂದ ಪಡೆದು ಆತನ ಪ್ಯಾಂಟಿನ ಎಡಜೇಬಿಗೆ ಹಾಕಿಕೊಂಡರು ಎಂದು ಸಹ ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ಮಹಜರ್ ಪ್ರಕ್ರಿಯೆಯನ್ನು ನಡೆಸಿ ಆರೋಪಿಯ ಪ್ಯಾಂಟಿನ ಎಡಜೇಬನ್ನು ತೊಳೆದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅದೇ ರೀತಿ ಆತ ತನ್ನ ಪ್ಯಾಂಟಿನ ಎಡಜೇಬಿನಿಂದ ಹಣ ತೆಗೆದು ತನಿಖಾಧಿಕಾರಿಯ ಮುಂದೆ ಹಾಜರು ಪಡಿಸಿದ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-15 ನ್ನು ನಾನು ಓದಿ ನೋಡಿ ನಂತರ ಸಹಿ ಹಾಕಿರುತ್ತೇನೆ. ನಿಪಿ-15 ರಲ್ಲಿ ಆರೋಪಿಯ ಪ್ಯಾಂಟಿನ ಎಡಜೇಬನ್ನು ಧ್ರಾವಣದಲ್ಲಿ ಅದ್ದಿ ತೊಳೆಯಲಾಗಿದೆ, ಎಂದು ಬರೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಮಹಜರನ್ನು ನನಗೆ ಓದಲು ಕೊಡದೇ ಇರುವುದರಿಂದ, ಈ ವಿಷಯ ನನಗೆ ಗೊತ್ತಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಪ್ಯಾಂಟಿನ ಜೇಬನ್ನು ಧ್ರಾವಣದಲ್ಲಿ ಅದ್ದಿ ತೊಳೆದಾಗ, ಆ ಜೇಬಿನ ಬಣ್ಣ ಬದಲಾಗಿತ್ತ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಲಿಲ್ಲ ಎಂದು ಹೇಳುತ್ತಾರೆ. ಆ ಪ್ಯಾಂಟಿನ ಜೇಬನ್ನು ತೊಳೆದ ಕೊಡಲೇ ಆ ಪ್ಯಾಂಟನ್ನು ಪ್ಯಾಕ್ ಮಾಡಿಕೊಂಡರು. ಒದ್ದೆ ಇರುವ ಬಟ್ಟೆಯನ್ನು ಕೂಡಲೇ ಮಡಿಚಿ ಇಟ್ಟರೆ, ಬೂಸ್ಟ್ ಬರುತ್ತದೆ, ನಂತರ ಕ್ರಮೇಣ ಬಟ್ಟೆ ಹಾಳಾಗುತ್ತದೆ ಎನ್ನುವುದು ಸರಿ.

18. ದೂರುದಾರರು ಟ್ರಾಪ್ ಆದ ನಂತರದಲ್ಲಿ ವಾಯ್ಸ್ ರೆಕಾರ್ಡರನ್ನು ತನಿಖಾಧಿಕಾರಿಯವರಿಗೆ ಕೊಟ್ಟಾಗ ಅದು ಆನ್ ಆಗಿತ್ತೋ, ಆಫ್ ಆಗಿತ್ತೊ ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಈ ವಾಯ್ಸ್ ರೆಕಾರ್ಡರಿನಲ್ಲಿ ಇದ್ದಂತಹ ಸಂಭಾಷಣೆಯನ್ನು ಸಿಡಿಗೆ ಯಾರು ವರ್ಗಾಯಿಸಿದರು ಎನ್ನುವುದನ್ನು ಟ್ರಾಪ್ ಮಹಜರಿನಲ್ಲಿ ನಮೂದಿಸಲಾಗಿದೆಯೋ, ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಆ ವಾಯ್ಸ್ ರೆಕಾರ್ಡರಿನಲ್ಲಿದ್ದ ಧ್ವನಿಯನ್ನು ತಹಸೀಲ್ದಾರ್ ಸುರೇಶ್ ಬಾಬರವರು ಗುರುತಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಆರೋಪಿಯು ಯಾವುದೇ ದಾಖಲಾತಿಗಳನ್ನು ಅಲ್ಲಿ ತನಿಖಾಧಿಕಾರಿಯ ಮುಂದೆ ಹಾಜರು ಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

ಕಂದಾಯ ಇಲಾಖೆಯಿಂದ ದಾಖಲಾತಿಗಳನ್ನು ತರಿಸಿರುತ್ತಾರೆ ಎನ್ನುವುದು ಸರಿ. ಆ ದಾಖಲಾತಿಗಳನ್ನು ಪಡೆದುಕೊಂಡ ನಂತರ, ಪ್ರತಿಯೊಂದು ದಾಖಲಾತಿಗೂ ತಹಸೀಲ್ದಾರರು ಅಟೆಸ್ಟ್ ಮಾಡಿರುತ್ತಾರೆ ಮತ್ತು ನಾನು ಸಹ ಸಹಿ ಹಾಕಿರುತ್ತೇನೆ ಎನ್ನುವುದು ಸರಿ.

19. ನಿಪಿ-14 ರ ಪುಟಸಂಖ್ಯೆ 167 ರಂತೆ ತೆರೆಸಾ ಬಿ., ಎನ್ನುವವರು ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿರುತ್ತಾರೆ ಎನ್ನುವುದು ಸರಿ.

20. ನಾನು ದಾಖಲಾತಿಗಳನ್ನು ಪರಿಶೀಲಿಸಿದಾಗ ನಿಂಗರಾಜು ರವರಿಗೆ ಸ್ವಂತ ಕೆಲಸ ಇರಲಿಲ್ಲ ಎನ್ನುವುದು ಸರಿ. ಈ ಜಮೀನನ್ನು ಪರಿವರ್ತನೆಗಾಗಿ ನಿಂಗರಾಜುವಿಗೆ ಯಾವ ದಿನ ವಹಿಸಿಕೊಟ್ಟರು ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ತೋರಿಸಿರುವುದಿಲ್ಲ. ಟ್ರಾಪ್ ಸಮಯಕ್ಕೆ ತನಿಖಾಧಿಕಾರಿ, ಆರೋಪಿಗೆ ಈ ಹಣ ನಿಮಗೆ ಹೇಗೆ ಬಂತು ಎಂದು ಕೇಳಿದ್ದರು ಎನ್ನುವುದು ಸರಿ. ಆಗ ಆರೋಪಿ ಲಿಖಿತ ಸಮಾಜಾಯಿಷಿಯನ್ನು ನೀಡಿದ್ದರು ಎನ್ನುವುದು ಸರಿ. ಆ ಸಮಾಜಾಯಿಷಿಯ ಮೇಲೆ ನಾನು ಸಹ ಸಹಿ ಹಾಕಿರುತ್ತೇನೆ ಎನ್ನುವುದು ಸರಿ. ಈ ಸಮಾಜಾಯಿಷಿಯಲ್ಲಿ ಆರೋಪಿ, ತಾನು ಮತ್ತು ನಿಂಗರಾಜು ಸ್ನೇಹಿತರು, ಅವರು ಒಂದು ಪೇಪರನ್ನು ನನಗೆ ತಿಳಿಯದ ಹಾಗೆ ನನ್ನ ಜೇಬಿನಲ್ಲಿ ಇಟ್ಟರು, ಎಂದು ತಿಳಿಸಿರುತ್ತಾರೆ ಎನ್ನುವುದು ಸರಿ. ಎಸಿಬಿ ಪೊಲೀಸರು ಹಣವನ್ನು ಮಾತ್ರ ತೆಗೆದುಕೊಂಡು, ಆ ಪೇಪರನ್ನು ತೆಗೆದುಕೊಂಡಿರುವುದಿಲ್ಲ ಎನ್ನುವುದು ಸರಿ. ನಾನು ಎಸಿಬಿ ಕಛೇರಿಗೆ ಹೋಗಿ ವಾಪಸ್ಸು ಬರುವವರೆಗೂ, ದಾಖಲಾತಿಗಳಲ್ಲಿ ಏನಾದರೂ ವ್ಯತ್ಯಾಸಗಳು ಇವೇಯೇ ಎಂದು ಪ್ರಶ್ನೆ ಮಾಡಿರುವುದಿಲ್ಲ ಎನ್ನುವುದು ಸರಿ.

21. ನಾನು ನ್ಯಾಯಾಲಯದ ಮುಂದೆ ಹೇಳಿದ ವಿಷಯಗಳೆಲ್ಲವೂ ಸುಳ್ಳಾಗಿರುವುತ್ತವೆ ಎನ್ನುವುದು ಸರಿಯಲ್ಲ.

<u>**ಮರು ವಿಚಾರಣೆಃ ಇಲ್ಲ.**</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.